ಸಾಕ್ಷಿಯನ್ನು ದಿನಾಂಕ 18.12.2024 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ.S.R.R. ವಕೀಲರಿಂದ :</u>**

3) ನಾನು ಮತ್ತು ಚಾಸಾ.1 ರವರು ಸುಮಾರು 10 ವರ್ಷಗಳಿಂದ ಸ್ನೇಹಿತರು. ಹಳೇಊರಮ್ಮ ದೇವಸ್ದಾನ ಮುಜರಾಯಿ ಇಲಾಖೆಗೆ ಒಳಪಡುತ್ತದೆ. ಸದರಿ ದೇವಸ್ದಾನದಲ್ಲಿ ಕೆಲಸ ಮಾಡಲು ನನ್ನನ್ನು ಮುಜಾರಾಯಿ ಇಲಾಖೆಯಿಂದ ನೇಮಿಸಿರುವುದಿಲ್ಲ. ನನ್ನ, ಚಾಸಾ.1 ಮತ್ತು 3 ರವರ ಹೆಸರುಗಳು ಮುಜರಾಯಿ ಇಲಾಖೆಯ ಪಟ್ಟಿಯಲ್ಲಿ ಇರುವುದಿಲ್ಲ. ಮುಜರಾಯಿ ಇಲಾಖೆಗೆ ಒಳಪಡುವ ದೇವಸ್ದಾನದಲ್ಲಿ ಸರ್ಕಾರದಿಂದ ನೇಮಿಸಿರುವ ವ್ಯಕ್ತಿಗಳು ಮಾತ್ರ ಕೆಲಸ ನಿರ್ವಹಿಸಬೇಕು ಎಂದರೆ ಸರಿಯಲ್ಲ. ನನ್ನ ವಯಸ್ಸು 24 ವರ್ಷ. ಚಾಸಾ.1 ರವರೊಂದಿಗೆ ನಾನು ವೈದ್ಯರ ಹತ್ತಿರ ಹೋಗಿದ್ದೆ.  ಪೊಲೀಸರಿಗೆ ಮಾಹಿತಿಯನ್ನು ನೀಡುವಂತೆ ನಾನು ವೈದ್ಯರಿಗೆ ತಿಳಿಸಿರುವುದಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಕೂಡಲೇ ದೂರನ್ನು ಕೊಡೋಣ ಎಂದು ಚಾಸಾ.1 ರವರಿಗೆ ಹೇಳಿರುತ್ತೇನೆ.

4) ನಾವು ಬೆಂಗಳೂರಿನಿಂದ ಮಧ್ಯಾಹ್ನ 3 ಗಂಟೆಗೆ ಹೊರಟಿರುತ್ತೇವೆ. ಈ ವಿಚಾರವನ್ನು ನಾನು ಹೇಳಿಕೆಯಲ್ಲಿ ಬರೆಸಿರುತ್ತೇನೆ.  ಘಟನೆಯು ಸುಮಾರು 4 ರಿಂದ 5 ಗಂಟೆಗೆ ಆಗಿರುತ್ತದೆ. ಬೆಂಗಳೂರಿನಿಂದ ಘಟನಾ ಸ್ದಳಕ್ಕೆ ಬರಲು ಸುಮಾರು ಒಂದು ಗಂಟೆ ಸಾಕು ಎಂದರೆ ಸಾಕ್ಷಿಯು ಸುಮಾರು 1 ರಿಂದ 2 ಗಂಟೆ ಬೇಕು ಎಂದು ನುಡಿಯುತ್ತಾರೆ. ಘಟನೆಯಾದ ದಿನದಂದು ಚಿಕಿತ್ಸೆ ಪಡೆದುಕೊಂಡ ನಂತರ ಚಾಸಾ.1 ರವರು ದೂರನ್ನು ಕೊಟ್ಟಿರುವುದಿಲ್ಲ. ದೂರನ್ನು ಯಾವಾಗ ಕೊಟ್ಟಿರುತ್ತಾರೆಂದು ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ನನ್ನ ಹೇಳಿಕೆಯಲ್ಲಿಯೂ ಸಹ ಸದರಿ ವಿಚಾರವನ್ನು ಹೇಳಿರುವುದಿಲ್ಲ. ಘಟನೆ ನಡೆದ ಎಷ್ಟು ಗಂಟೆಗಳ ಒಳಗೆ ನನ್ನನ್ನು ಪೊಲೀಸರು ವಿಚಾರಣೆ ಮಾಡಿರುತ್ತಾರೆಂದು ಗೊತ್ತಿಲ್ಲ. ಘಟನೆ ನಡೆದ ಎರಡು ದಿನಗಳ ನಂತರ ಪೊಲೀಸರು ನನ್ನನ್ನು ಕರೆಸಿರುತ್ತಾರೆ. ಆಗ ಪೊಲೀಸರು ಹೇಳಿಕೆಯನ್ನು ನೀಡಬೇಕು ಎಂದು ನನ್ನ ಸಹಿಗಳನ್ನು

ಪಡೆದುಕೊಂಡಿರುತ್ತಾರೆಂದರೆ ಸರಿ. ಅದರಲ್ಲಿ ಏನೆಲ್ಲಾ ಬರೆದುಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ.

5) ನಾನು, ಚಾಸಾ.1 ಮತ್ತು 3 ರವರು ಒಂದೇ ಜನಾಂಗದವರು ಎಂದರೆ ಸರಿ. ನಾವುಗಳು ಸುಳ್ಳು ದೂರುಗಳನ್ನು ಕೊಡಿಸಿ ಹಣ ವಸೂಲಿ ಮಾಡುವ ಹವ್ಯಾಸ ಇಟ್ಟುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಾವು ಹಣ ನೀಡಿದರೆ ಪೋ.ಠಾಣೆಗೆ ಹೋಗಿ ದೂರನ್ನು ವಾಪಸ್ ಪಡೆದುಕೊಳ್ಳುವುದು, ಇಲ್ಲದಿದ್ದರೆ ಪೋ.ಠಾಣೆಗೆ ಹೋಗಿ ಪ್ರಕರಣ ದಾಖಲು ಮಾಡಬೇಕೆಂದು ಒತ್ತಾಯ ಮಾಡುತ್ತೇವೆ ಎಂದರೆ ಸರಿಯಲ್ಲ.

6) ಹುಲಿಯೂರುದುರ್ಗದಿಂದ ರಾಜಾಪುರ ಗೇಟ್ ಗೆ ಸುಮಾರು 4 ರಿಂದ 5 ಕಿ.ಮೀ ದೂರ ಇರುತ್ತದೆ. ರಾಜಾಪುರ ಗೇಟ್ ನಿಂದ ಹುಲಿಯೂರುದುರ್ಗಕ್ಕೆ ಸುಮಾರು 10 ರಿಂದ 15 ನಿಮಿಷದಲ್ಲಿ ಬರಬಹುದು ಎಂದರೆ ಸರಿ. ನಾವು ಟೆಂಪೋ ವಾಹನದಲ್ಲಿ ಬರುತ್ತಿದ್ದಾಗ ಚಾಸಾ.1 ರವರ ಕಾಲು 1 ನೇ ಆರೋಪಿಗೆ ತಗುಲಿದ್ದು ಆ ಕಾರಣಕ್ಕೆ ಜಗಳ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.3 ರವರು ಜಗಳವನ್ನು ಬಿಡಿಸಿಕೊಂಡಿರುತ್ತೇವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ.1 ರವರಿಗೆ ಹೊಡೆದು ಗುದ್ದಾಡಿ ಕಣ್ಣಿನ ಭಾಗಕ್ಕೆ ಗಾಯ ಮಾಡಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ನನಗೆ ಹೊಲೆಯ ಮಾದಿಗ ನನ್ನ ಮಕ್ಕಳು ಎಂದು ಜಾತಿ ನಿಂದನೆ ಮಾಡಿರುತ್ತಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7) ದೂರನ್ನು ಕೊಡಲು ಹೋದಾಗ ಚಾಸಾ.1 ರವರೊಂದಿಗೆ ನಾನೂ ಸಹ ಇದ್ದೆ. ನಮ್ಮೊಂದಿಗೆ ಚಾಸಾ.3, ಕಾರ್ತಿಕ್, ಅರುಣ್ ಮತ್ತು ಶ್ರೀಕಾಂತ್ ರವರು ಇದ್ದರು. ದೂರನ್ನು ಕೊಡುವುದಕ್ಕಿಂತ ಮುಂಚೆ ನಾವೆಲ್ಲರೂ ಘಟನೆಯಾದ ನಂತರ ಸಮಾಲೋಚನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ.1, ಕಾರ್ತಿಕ್, ಪ್ರತಾಪ, ಅರುಣ್ ರವರು ದೂರನ್ನು ಯಾವ ರೀತಿ ಕೊಡಬೇಕೆಂದು ಚರ್ಚೆ ಮಾಡಿರುತ್ತಾರೆ.

ನಾನು ಮತ್ತು ಚಾಸಾ.1 ರವರು ಸಂಬಂಧಿಕರು ಎಂದರೆ ಸರಿಯಲ್ಲ. ಯಾವುದೇ ಗಲಾಟೆ ಆಗದಿದ್ದರೂ ಸಹ ಆರೋಪಿಗಳ ಮೇಲೆ ಇರುವ ವೈಷಮ್ಯದಿಂದ ಸುಳ್ಳು ದೂರನ್ನು ಸೃಷ್ಟಿ ಮಾಡಿ ಕೊಡಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರ ಮೇಲೆ ನಾನು, ಚಾಸಾ.1 ಮತ್ತು 3 ರವರು ಸುಳ್ಳು ದೂರನ್ನು ಸೃಷ್ಟಿ ಮಾಡಿಕೊಂಡು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ